# ನಂಬಿಕೆ ಮತ್ತು ಪ್ರಾರ್ಥನೆ

ಪುಷ್ಪಾ ಶೇಷಾದ್ರಿ



ಆಧ್ಯಾತ್ಮಿಕ ಸಾಧನೆ ಮಾಡುವವರಲ್ಲಿ ಇರಬೇಕಾದ ಮೂಲಭೂತ ಗುಣಗಳಲ್ಲಿ ನಂಬಿಕೆ ಮತ್ತು ಪ್ರಾರ್ಥನೆ ಬಹಳ ಮುಖ್ಯವಾದವುಗಳು. ಇವುಗಳ ಬಗ್ಗೆ ಇಲ್ಲಿ ಒಂದು ಕಥೆಯ ಮೂಲಕ ಚಿಂತನೆ ನಡೆಸಲಾಗಿದೆ. ಲೇಖಕಿ ಮೈಸೂರು ಆಶ್ರಮದ ಭಕ್ತರು. ಅವರ ಹಲವು ಲೇಖನಗಳು ಈ ಪತ್ರಿಕೆಯಲ್ಲಿ ಪ್ರಕಟವಾಗಿವೆ.

ನಂಬಿಕೆ ಒಂದು ಮನೋಭಾವ. ಅದು ಒಮ್ಮಿಂದೊಮ್ಮೆಯೇ ಬರುವುದಿಲ್ಲ. ಕ್ರಮೇಣ ಅಭ್ಯಾಸ ಬಲದಿಂದ ನಂಬಿಕೆಯನ್ನು ಹೆಚ್ಚಿಸಿಕೊಳ್ಳಬಹುದು. ನಂಬಿಕೆ ಎಂದರೆ ದೃಢ ವಿಶ್ವಾಸ. ಅದು ಸಂತೆ ಅಥವಾ ಮಾಲ್‌ಗಳಲ್ಲಿ ಹಣಕ್ಕೆ ಸಿಗುವಂತಹುದಲ್ಲ. ನಂಬಿಕೆಯನ್ನು ಅಭ್ಯಾಸ ಮತ್ತು ದೃಢ ವಿಶ್ವಾಸದಿಂದ ಪಡೆಯಬೇಕು. ಭಗವದ್ಗೀತೆಯಲ್ಲಿ ಶ್ರೀಕೃಷ್ಣನು ಅಭ್ಯಾಸಯೋಗದ ಬಗ್ಗೆ ಸಾಕಷ್ಟು ತಿಳಿಸಿರುವನು. ಅಭ್ಯಾಸವನ್ನು ಮಾಡಲು ಸಾಕಷ್ಟು ತಾಳ್ಮೆ ಬೇಕು. ಕೆಟ್ಟದೇ ಇರಲಿ, ಅಥವಾ ಒಳ್ಳೆಯದೇ ಇರಲಿ, ಅದು ಸ್ವಭಾವವಾಗುವುದು ನಿಶ್ಚಿತ. ಆ ಸ್ವಭಾವವು ನಂಬಿಕೆಯಾಗುವುದು. ನಂಬಿಕೆಯಲ್ಲಿ ಕೊಟ್ಟು, ತೆಗೆದುಕೊಳ್ಳುವ ವ್ಯವಹಾರ ಇರುವುದಿಲ್ಲ. ವ್ಯಾವಹಾರಿಕ ಜೀವನದಲ್ಲಿ ನಂಬಿಕೆಯಿಂದ ಮೋಸ ಹೋಗಬಹುದು. ಆದರೆ ಪಾರಮಾರ್ಥಿಕ ಜೀವನದಲ್ಲಿ ಯಾರೂ ಎಂದೂ ಮೋಸ ಹೋಗುವುದಿಲ್ಲ.

ದೇವರಲ್ಲಿ ಕ್ಷುಲ್ಲಕ ವಿಷಯಕ್ಕಾಗಿ ಬೇಡಬಾರದು.

‘‘ನಂಬಿ ಕೆಟ್ಟವರಿಲ್ಲವೋ ಹರಿಯೇ । ನಿನ್ನ ನಂಬದೇ ಕೆಟ್ಟರೆ ಕೆಡಲಿ ॥’’ ಎಂಬ ದಾಸರ ನುಡಿ ಸತ್ಯ. ಒಂದು ಸಂದಿಗ್ಧ ಪರಿಸ್ಥಿತಿಯಲ್ಲಿ, ದೇವರನ್ನು ‘ನಿನ್ನನ್ನೇ ನಾನು ನಂಬಿರುವೆ’ ಎಂದು ದೀನ ಭಾವದಿಂದ ಪ್ರಾರ್ಥಿಸಿದರೂ, ನಮ್ಮ ಸಂಕಷ್ಟ ಸ್ಥಿತಿ ಪರಿಹಾರವಾಗಲಿಲ್ಲ ಎಂದು ಭಾವಿಸುವುದೇ ಮಾನವನ ಸಹಜ ಗುಣ. ನಮ್ಮ ಹಿಂದಿನ ಸಂಸ್ಕಾರ ಬಲವಾಗಿದ್ದಲ್ಲಿ ಅದರ ಫಲವನ್ನು ಈಗ ಅನುಭವಿಸಿಯೇ ತೀರಬೇಕು. ಆದರೆ ಪರಮಾತ್ಮನಲ್ಲಿ ನಂಬಿಕೆಯಿಂದ ಶರಣಾದರೆ, ನಮ್ಮ ಕಷ್ಟಗಳನ್ನು ಸಹಿಸುವ ಶಕ್ತಿಯನ್ನು ಅವನು ಅನುಗ್ರಹಿಸುವನು. ನಂಬಿಕೆ ಮತ್ತು ಪ್ರಾರ್ಥನೆಯಿಂದ ನಮ್ಮ ಸ್ವಭಾವವನ್ನು ಬದಲಾಯಿಸಿಕೊಳ್ಳಬಹುದು.

ಈ ವಿಷಯದಲ್ಲಿ ಒಂದು ನೀತಿಕಥೆಯನ್ನು ನೆನೆಯಬಹುದು. ಬಹಳ ದಿನಗಳ ಹಿಂದೆ, ಆದಿತ್ಯನೆಂಬ ರಾಜನು, ಕಾಶೀರಾಜ್ಯವನ್ನು ಆಳುತ್ತಿದ್ದ. ಅವನ ಸಾತ್ವಿಕತೆ, ದಾನ-ಧರ್ಮದ ಗುಣಗಳನ್ನು, ಪ್ರಜೆಗಳು ಮೆಚ್ಚಿಕೊಳ್ಳುತ್ತಿದ್ದರು. ಅವನ ಪತ್ನಿ ಸುಮತೀದೇವಿ ಸಹ, ಅವನಿಗೆ ತಕ್ಕಂತೆ ಧರ್ಮಪತ್ನಿಯಾಗಿದ್ದಳು. ಅವರಿಗೆ ವಿಕ್ರಮನೆಂಬ ಮಗನಿದ್ದನು. ರಾಜ್ಯದಲ್ಲಿ ಯಾವುದೇ ರೀತಿಯ ಕುಂದು-ಕೊರತೆ ಇರಲಿಲ್ಲ. ಹೀಗಿರುವಾಗ ಒಮ್ಮೆ ಒಂದು ಅನಾಹುತ ಜರುಗಿತು. ರಾಣಿ ಸುಮತೀದೇವಿ ನದಿಯಲ್ಲಿ ಸ್ನಾನ ಮಾಡಲು ಹೋದಾಗ, ಕಾಲು ಜಾರಿ ನದಿಯ ಪಾಲಾದಳು. ಇದರಿಂದ ರಾಜನಿಗೆ ಬಹಳ ದುಃಖವಾಯಿತು. ಆಡಳಿತದ ಬಗ್ಗೆ ಗಮನ ಕಮ್ಮಿಯಾಯಿತು. ಇದನ್ನು ಅರಿತ ರಾಜನ ಮುಖ್ಯಮಂತ್ರಿ, ಪುನಃ ರಾಜ್ಯವನ್ನು ಮೊದಲಿನ ಹಂತಕ್ಕೆ ತರಲು ಯೋಚಿಸಿದ. ರಾಜನಿಗೆ ಪುನಃ ವಿವಾಹವಾಗಬೇಕೆಂದು ಬಲವಂತ ಪಡಿಸಿದನು. ಅವನ ಮಾತಿಗೆ ಓಗೊಟ್ಟು

ರಾಜನು, ಕುಶಾಲನಗರದ ರಾಜಕುಮಾರಿ ವಿದ್ಯಾವತಿಯನ್ನು ವಿವಾಹಮಾಡಿಕೊಂಡನು. ಇದರಿಂದ ರಾಜನಿಗೆ ಸ್ವಲ್ಪ ಸಮಾಧಾನವೆನಿಸಿತು. ರಾಜ್ಯದ ಆಡಳಿತ ಮೊದಲಿನಂತೆ ನಡೆಯಿತು. ಕ್ರಮೇಣ ವಿದ್ಯಾವತಿಯಿಂದ ರಾಜನು ಶಂಕರನೆಂಬ ಮಗನನ್ನು ಪಡೆದನು.

ಈ ಇಬ್ಬರೂ ಮಕ್ಕಳೂ ಜೊತೆಜೊತೆಯಲ್ಲಿ ಬೆಳೆದರು. ಕಾಲಕ್ರಮೇಣ, ಮಂತ್ರಿಗಳು, ಹಿರಿಯ ಮಗ ವಿಕ್ರಮನಿಗೆ ರಾಜ್ಯಾಡಳಿತವನ್ನು ವಹಿಸಲು ರಾಜನಿಗೆ ಸಲಹೆ ನೀಡಿದರು. ಇದನ್ನು ಅರಿತ ವಿದ್ಯಾವತಿಯು, ತನ್ನ ಮಗ ಶಂಕರನೇ ರಾಜ್ಯಾಡಳಿತವನ್ನು ವಹಿಸಬೇಕೆಂದು ಬಯಸಿದಳು. ಆದರೆ ಹಿರಿಯ ಮಗನಿರುವಾಗ ಇದು ಸಾಧ್ಯವಿಲ್ಲವೆಂದು ಎಲ್ಲರೂ ಸಲಹೆ ನೀಡಿದರು. ಶಂಕರನು ರಾಜನಾಗಬೇಕಾದರೆ, ವಿಕ್ರಮನನ್ನು ಹೊರಹಾಕಬೇಕೆಂದು ವಿದ್ಯಾವತಿಯು ನಿರ್ಧರಿಸಿದಳು. ಇದಕ್ಕಾಗಿ ತನ್ನ ಅತ್ಯಂತ ಪ್ರೀತಿ ಮತ್ತು ನಂಬಿಕೆಯ ದಾಸಿಯಾದ ಅಂಜಲಿಯ ಸಲಹೆಯನ್ನು ಕೋರಿದಳು. ಹೇಗಾದರೂ ಮಾಡಿ ವಿಕ್ರಮನಿಗೆ ಕೊಡುವ ಹಾಲಿನಲ್ಲಿ ವಿಷವನ್ನು ಬೆರಸಿ, ಅವನನ್ನು ಮುಗಿಸಲು ನಿರ್ಧರಿಸಿದಳು. ಈ ವಿಷಯವನ್ನು ಅಂಜಲಿಯಲ್ಲಿ ಅರಿಕೆ ಮಾಡಿಕೊಂಡಳು. ಆದರೆ ಅಂಜಲಿಗೆ ಇದು ಸಮ್ಮತವಾಗಲಿಲ್ಲ. ದಾಸಿ ಅಂಜಲಿಯು ರಾಜ್ಯಕ್ಕೆ ಅತ್ಯಂತ ನಿಷ್ಠೆಯಿಂದಿದ್ದಳು. ಆದರೆ ರಾಣಿಯ ಮನಸ್ಸಿಗೂ ನೋವನ್ನುಂಟುಮಾಡಲಾಗದ ಪರಿಸ್ಥಿತಿಗೆ ಸಿಲುಕಿದಳು. ಒಂದೆರಡು ದಿನ ಸಮಯ ಕೇಳಿ, 'ಯೋಚಿಸಿ ಹೇಳುವೆ'ನೆಂದು ರಾಣಿಗೆ ಅರುಹಿದಳು. ನಂತರ ಒಂದು ಯೋಜನೆಯನ್ನು ಹಾಕಿ, ರಾಣಿ ಬಳಿ ಬಂದು, ''ಈಗಲೇ ವಿಷವನ್ನು ಹಾಕಿ ವಿಕ್ರಮನಿಗೆ ನೀಡಿದರೆ, ನೀವು ಮಲತಾಯಿಯಾದ್ದರಿಂದ, ನಿಮ್ಮ ಮೇಲೆ ಅನುಮಾನ ಬರುವುದು ಸಹಜ. ಆದ್ದರಿಂದ ಇದನ್ನು ಈಗಲೇ ಮಾಡದೆ, ಕೆಲವು ದಿನ ವಿಕ್ರಮನನ್ನು ನೀವು ಅತ್ಯಂತ ಪ್ರೀತಿಸುವಂತೆ ನಟಿಸಬೇಕು ಮತ್ತು ಪ್ರತಿದಿನ ಬೆಳಗ್ಗೆ ರಾಜ್ಯದ ದೇವತೆ ವಿಶಾಲಾಕ್ಷಿಯಲ್ಲಿ, ಅತ್ಯಂತ ನಮ್ರತೆಯಿಂದ ಪೂಜೆ ಮಾಡಿ, ವಿಕ್ರಮನಿಗೆ ಆಯುಸ್ಸನ್ನು ಕರುಣಿಸಲು ಬೇಡಿಕೊಳ್ಳಬೇಕು. ಆದರೆ ಇದನ್ನು ನೀವು ಒಂದು ವರ್ಷ ತಪ್ಪದೇ ಮಾಡಬೇಕು'' ಎಂದಳು. ನಂತರ ವಿಕ್ರಮನಿಗೆ ನೀವು ಹೇಳಿದಂತೆ ಮಾಡಿದರೆ, ಯಾರಿಗೂ ನಿಮ್ಮ ಮೇಲೆ ಸಂಶಯ ಬರುವುದಿಲ್ಲ; ಆಗ ನಿನ್ನ ಮಗ ಶಂಕರನು ಪಟ್ಟಕ್ಕೆ ಬರುವುದು ಖಚಿತ ಎಂದಳು. ರಾಣಿ ವಿದ್ಯಾವತಿಗೆ ಈ ಯೋಜನೆ ಒಪ್ಪಿಗೆಯಾಯಿತು.

ಮಾರನೇ ದಿನದಿಂದಲೇ ಬೆಳಗ್ಗೆ ಎದ್ದು ಶುಚಿಯಾಗಿ, ಹೂವು, ದೀಪ, ನೈವೇದ್ಯ ಇತ್ಯಾದಿಗಳಿಂದ ನಮ್ರತೆಯಿಂದ ದೇವಿಯ ಪೂಜೆಯನ್ನು ಮಾಡಿ, ವಿಕ್ರಮನಿಗಾಗಿ ಬೇಡಿಕೊಂಡಳು. ಅಲ್ಲದೆ, ಸವತಿ ಸುಮತಿಯ ಚಿತ್ರಪಟಕ್ಕೆ ಪ್ರತಿದಿನವೂ ಹೊಸ ಹೂವಿನ ಹಾರವನ್ನು ಹಾಕುತ್ತಿದ್ದಳು. ವಿಕ್ರಮನನ್ನು ಎಲ್ಲರೆದುರೂ ಪ್ರೀತಿಸುವಂತೆ ನಟನೆ ಮಾಡಿದಳು. ರಾಜ, ಮಂತ್ರಿ ಎಲ್ಲರೂ, ರಾಣಿ ವಿದ್ಯಾವತಿಯನ್ನು ಪ್ರಶಂಸಿಸಿದರು.

ಕಾಲ ಯಾರಿಗೂ ಕಾಯುವುದಿಲ್ಲ. ದಿನಗಳು, ತಿಂಗಳುಗಳು ಕಳೆದು ವರ್ಷಕ್ಕೆ ಬಂದಿತು. ಆ ವೇಳೆಗೆ ರಾಣಿಗೇ ಅರಿವಾಗದಂತೆ, ಅವಳಲ್ಲಿ ಪರಿವರ್ತನೆಯಾಯಿತು. ಅರಿವಿಲ್ಲದಂತೆ ವಿಕ್ರಮನನ್ನು ಮನಸಾರೆ ಪ್ರೀತಿಸತೊಡಗಿದಳು. ಈ ಪರಿವರ್ತನೆಗೆ ಕಾರಣ, ದೇವರಲ್ಲಿ ಅವಳಿಗೆ ನಂಬಿಕೆ ಮತ್ತು ದೃಢ-ವಿಶ್ವಾಸ.

ಈ ವೇಳೆಗೆ ವಿಕ್ರಮನು ವಿದ್ಯಾವತಿಯು ಮಲತಾಯಿಯಾದರೂ ತನ್ನನ್ನು ಸ್ವಂತ ಮಗನೆಂದು ಭಾವಿಸಿ, ಅದೆಷ್ಟು ಪ್ರೀತಿಸುವಳು! ಆದ್ದರಿಂದ ನಾನೇ ರಾಜ್ಯವನ್ನು ತ್ಯಾಗಮಾಡಿ ನನ್ನ ತಮ್ಮ ಶಂಕರನಿಗೆ ಏಕೆ ಒಪ್ಪಿಸಬಾರದು? ಎಂದು ಯೋಚಿಸಿದ. ತಾಯಿ ವಿದ್ಯಾವತಿಯ ಬಳಿಗೆ ಹೋಗಿ, ''ಅಮ್ಮಾ ನೀನು ನನ್ನನ್ನು ಅದೆಷ್ಟು ಪ್ರೀತಿಸುವೆ, ಅದಕ್ಕಾಗಿ ನಾನು ಒಂದು ನಿರ್ಧಾರಕ್ಕೆ ಬಂದಿರುವೆನು. ಈ ರಾಜ್ಯವನ್ನು ನನ್ನ ತಮ್ಮನಿಗೆ ಒಪ್ಪಿಸಿ, ಅವನಿಗೆ ನಾನು ಸಹಾಯಕನಾಗಿ ಇರುವೆ. ಇದಕ್ಕೂ ನೀನು ಮತ್ತು ತಂದೆಯೂ ಸಹ ಒಪ್ಪಲೇಬೇಕು.'' ವಿಕ್ರಮನ ಮಾತು ಕೇಳಿ ವಿದ್ಯಾವತಿ ಚಕಿತಳಾದಳು.

ದಾಸಿ, ಅಂಜಲಿಯು ಎಲ್ಲಾ ಬದಲಾವಣೆಗಳನ್ನೂ ಸೂಕ್ಷ್ಮವಾಗಿ ಗಮನಿಸಿದಳು. ಈಗ ಸರಿಯಾದ ಸಮಯವು ಬಂದಿದೆ ಎಂದು, ಹಾಲಿನಲ್ಲಿ ವಿಷವನ್ನು ಬೆರೆಸಿರುವೆನೆಂದು ಹೇಳಿ ಅದನ್ನು ವಿಕ್ರಮನಿಗೆ ಕೊಡಲು ವಿದ್ಯಾವತಿಯ ಕೈಗೆ ನೀಡಿದಳು. ಆ ವೇಳೆಗೆ ವಿದ್ಯಾವತಿಯ ಮನದಲ್ಲಿ ಪವಿತ್ರವಾದ ಪರಿವರ್ತನೆ ಆಗಿತ್ತು. ಕಂಬನಿ ತುಂಬಿದ ರಾಣಿ, ಆ ಹಾಲಿನ ಬಟ್ಟಲನ್ನು ವಿಕ್ರಮನಿಗೆ ಕೊಡದೇ, ತಾನೇ ಒಂದೇ ಸಲಕ್ಕೆ ಕುಡಿದಳು. ಆಶ್ಚರ್ಯವೆಂದರೆ ಅವಳಿಗೆ ಏನೂ ತೊಂದರೆ ಆಗಲಿಲ್ಲ. ಅದನ್ನು ಗಮನಿಸಿದ ದಾಸಿ ಅಂಜಲಿ,

''ಅಮ್ಮಾ, ನಿಮ್ಮ ಮನಸ್ಸು ಪರಿವರ್ತನೆ ಆಗಿದೆಯೆಂದು ತಿಳಿಯಿತು. ಆದುದರಿಂದ ಆ ಹಾಲಿನಲ್ಲಿ ಯಾವ ವಿಷವನ್ನೂ ನಾನು ಬೆರೆಸಿರಲಿಲ್ಲ''ಎಂದಳು.

ದೇವರಲ್ಲಿ ಇಟ್ಟಿದ್ದ ವಿಶ್ವಾಸ, ನಂಬಿಕೆ, ಪ್ರಾರ್ಥನೆ ಅವಳ ವಿಷದ ಮನಸ್ಸನ್ನೇ ಪರಿವರ್ತಿಸಿ, ಮನದಲ್ಲಿ ಅಮೃತವನ್ನು ತುಂಬಿಸಿತು.

ಇಂತಿದೆ, ನಂಬಿಕೆ, ಪ್ರಾರ್ಥನೆಯ ಮಹಿಮೆ.

ನಾವು ಪೂಜೆ ಮಾಡುವಾಗ, ಭಕ್ತಿಯಿಂದ, ಹೂವು ಹಣ್ಣು, ನೈವೇದ್ಯ, ಆರತಿ ಇತ್ಯಾದಿಗಳನ್ನು ದೇವರಿಗೆ ಅರ್ಪಿಸುವುದೇ ನಿಜವಾದ ಆರಾಧನೆ.

ನಮ್ಮ ಕಣ್ಣಿಗೆ ಗೋಚರವಾಗದಿದ್ದರೂ, ದೇವರು, ಎಲ್ಲವನ್ನೂ ಸ್ವೀಕರಿಸಿ, ನಮಗೆ ಫಲ ಕೊಡುವುದೇ ನಾವು ಮಾಡುವ ಪೂಜೆಯ ಪ್ರಸಾದ.